

ಮಹಾರಾಣಿಯ ಪಾದದಲ್ಲಿ ದೃಷ್ಟಿ ನೆಟ್ಟಳು. ಇಷ್ಟರಲ್ಲಿ ತಾಯಿ ತಂದೆ ಇಬ್ಬರೂ ರಾಣಿಗೆ ಕಾಲಿಗೆ ಬಿದ್ದು ನಮಸ್ಕಾರ ಮಾಡಿದ್ದಾಗಿತ್ತು. ಇವಳಿಗೂ ಕೂಡ ಸೂಚನೆ ನೀಡಿ ಇವಳೂ ಆ ಕೆಲಸ ಮಾಡಿ ಆಯಿತು. ಚಿನ್ನದ ಕಾಲುಂಗುರ ಧರಿಸಿದ್ದ ರಾಣಿಯ ಪಾದ ಮುಟ್ಟಿದಾಗ ಇವಳಿಗೆ ರೋಮಾಂಚನ. ರಾಣಿ ಹೇಳಿದಳು 'ಅಂಜು... ನಿನ್ನನ್ನ ಯಾಕೆ ಕರೆಸಿದೆ ಗೊತ್ತಾ?' ಮೃದುವಾಗಿತ್ತು ಅವಳ ನುಡಿ. 'ಇಲ್ಲ...' ತಲೆ ತಗ್ಗಿಸಿಯೇ ಅಲ್ಲಾಡಿಸಿದಳು. ಆದರೆ ಅವಳ ಮನಸ್ಸು ಹೇಳುತ್ತಿತ್ತು ಮಹಾರಾಣಿ ಹೇಳುತ್ತಾರೆ, 'ಇನ್ನುಮೇಲೆ ನೀನು ಈ ಅರಮನೆಯ ಮಹಾರಾಣಿ ಆಗುತ್ತೀಯ. ಸಂತೋಷವೇ? ರಾಜಕುವರ ನಿನ್ನನ್ನು ಮೆಚ್ಚಿದ್ದಾನೆ. ನಿನ್ನನ್ನು ನೋಡಲೆಂದು ಕರೆಸಿದೆವು'. ಆದರೆ ರಾಣಿ ಹೇಳಿದಳು, 'ನಿನ್ನ ಕಸೂತಿಯಿಂದ ನಮ್ಮ ಮನಸ್ಸು ಆನಂದವಾಗಿದೆ. ನನಗೆ ಹಾಸಿಗೆಯ ಮೇಲು ಹೊದಿಕೆ ಮತ್ತು ದಿಂಬಿನ ಹೊದಿಕೆಗಳನ್ನು ಕಸೂತಿಯಲ್ಲಿ ಮಾಡಿ ಕೊಡುವೆಯಾ?' ಅಂಜುವಿನ ಕಾಲಡಿಯ ನೆಲ ಥಟ್ಟೆಂದು ಕುಸಿಯಿತು. ಅವಳು ಅಂದುಕೊಂಡಿದ್ದೇ ಬೇರೆ. ಅಲ್ಲಿ ನಡೆದುದೇ ಬೇರೆ. ಅವಳ ತಾಯಿತಂದೆಗಂತೂ ಬೆಟ್ಟದಂಥ ಕಷ್ಟ ಹತ್ತಿಯಂತೆ ಇಳಿಯಿತು ಎಂಬಂತಾಯಿತು. ಸದ್ಯ, ಮಹಾರಾಣಿ ಏನೂ ಕೇಳಲಿಲ್ಲ. ಅಂಜು ಮಾಡಿಕೊಡುವೆ ಎಂದು ತಲೆಯಾಡಿಸಿದಳು. 'ನೋಡು ಸುತ್ತಲೂ ಬಂಗಾರದ ನವಿಲುಗಳಿರಬೇಕು. ಸಣ್ಣ ಸಣ್ಣ ನವಿಲುಗಳು. ಮಧ್ಯದಲ್ಲಿ ದೊಡ್ಡ ಚಿತ್ರ ಇರಲಿ. ಅದು ನಿನ್ನ ಇಷ್ಟಕ್ಕೆ ಬಿಟ್ಟಿದ್ದು. ಮತ್ತು ಕುಚ್ಚು ಕಟ್ಟಬೇಕು. ತಿಳಿಯಿತೇ?' ಅಪ್ಪಣೆ ಎಂಬಂತೆ ಹೇಳಿದಳು ರಾಣಿ. ಆಗಲಿ ಎಂಬಂತೆ ತಲೆಯಾಡಿಸಿದಳು ಅಂಜು. ಈಗ ತಂದೆ ಬಾಯಿ ಬಿಟ್ಟನು... 'ಏನಿಲ್ಲವೆಂದರೂ ಒಂದೆರಡು ವಾರಗಳಾಗಬಹುದು...' ಆಗಲಿ... ಚಿಂತೆಯಿಲ್ಲ.' ರಾಣಿ ಗಂಭೀರವಾಗಿ ನುಡಿದಳು. 'ಇದನ್ನು ರಾಜಕುಮಾರನ ವಿವಾಹ ಮಹೋತ್ಸವದಲ್ಲಿ ಉಪಯೋಗಿಸಬೇಕು ಎಂಬುದು ನಮ್ಮ ಅಪೇಕ್ಷೆ. ಇನ್ನೂ ಆರು ತಿಂಗಳ ಸಮಯವಿದೆ. ಮೇವಾರದ ರಾಜಕುವರಿ ಚಾರುಲತಳೊಂದಿಗೆ ಅವನ ವಿವಾಹ ನಿಶ್ಚಯವಾಗಿದೆ. ಅಷ್ಟರಲ್ಲಿ ಈ ಕಾರ್ಯ ಆದರೆ ಸಾಕು.' ರಾಣಿ ಅಪ್ಪಣೆ ಎಂಬಂತೆ ನುಡಿದಳು. ಅಂಜು ನೆಲದಾಳದಲ್ಲಿ ಧಪ್ಪೆಂದು ಬಿದ್ದುಬಿಟ್ಟಳು. 'ತಾವು ಪ್ರಸಾದ ಸ್ವೀಕರಿಸಿ ಪ್ರಯಾಣಿಸಿ. ತಮ್ಮ ಶುಲ್ಕ ತಮ್ಮ ಮನೆ ಸೇರುತ್ತದೆ.' ಮಾತು ಮುಗಿಸಿ ಮಹಾರಾಣಿ ಎದ್ದಳು. ಹದಿನಾಲ್ಕರ ಅಂಜು ತಲೆ ತಗ್ಗಿಸಿ ನಿಂತಿದ್ದಳು. ರಾಣಿ ಅವಳ ಹತ್ತಿರ ಹೋಗಿ ಅವಳ ತಲೆ ಸವರಿದಳು. 'ನಿನ್ನ ಬದುಕು ಉಜ್ವಲವಾಗಲಿ. ನಿನ್ನ ಕೋರಿಕೆಗಳೆಲ್ಲ ಈಡೇರಲಿ. ನಿನ್ನ ಜೀವನದಲ್ಲಿ ಏನೇ ತೊಂದರೆ ಬಂದರೂ ನಾವಿರುತ್ತೇವೆ. ನಿನ್ನ ಹೆಸರು ಅಂಜು... ಆದರೆ ಎಂದಿಗೂ ಅಂಜದಿರು.' ತಮ್ಮ ಕುತ್ತಿಗೆಯಿಂದ ಒಂದು ಸರವನ್ನು ತೆಗೆದು ಅವಳ ಕೊರಳಿಗೆ ಹಾಕಿದರು.

ಮನೆಗೆ ಹಿಂತಿರುಗಿದವಳ ಮನಸ್ಸು ಭಾರ ಭಾರ. ತಂದೆ ತಾಯಿಯರಿಗೆ ಮನಸ್ಸು ನಿರಾಳ. ಅಂತೂ ರಾಜಕುವರನಿಗೆ ನಿಶ್ಚಯ ಆಗಿದೆ. ಮಗಳಿಗೂ ನಿಶ್ಚಯ ಶಾಸ್ತ್ರ ಮುಗಿಸಿಬಿಟ್ಟರೆ ಸಾಕು. ಎಲ್ಲ ಹಗುರ. ಮಹಾರಾಣಿಯ ಕಾರ್ಯಕ್ಕೆ ಕುಶಲ ವಸ್ತುಗಳನ್ನು ಜೋಡಿಸುತ್ತಾ ಬಂಗಾರದ ನವಿಲುಗಳ ಕಾರ್ಯಭರದಲ್ಲಿ ತೊಡಗಿದಳು ಅಂಜು. ಹಗಲು ರಾತ್ರಿ ನೇಯುತ್ತಾ ಹಾಡುತ್ತಿದ್ದಳು... 'ಲಕ್ ಚಿಪ್ ನ ಜಾವ್ರೋಜಿ... ಮನ್ನೆ ಡೀಡ್ ಕರಾವ್ರೋಜಿ...' ನನ್ನ ಪ್ರೇಮದ ಹೆಣಿಗೆಯ ತುಂಬಾ ನಿನ್ನದೇ ಕಸೂತಿ... ತಂದೆ ಹೇಳಿದಂತೆ ಹನ್ನೆರಡೇ ದಿನಗಳಲ್ಲಿ ಅವಳು ಕಸೂತಿಯನ್ನು ಸಂಪೂರ್ಣ ಗೊಳಿಸಿದ್ದಳು. ಮಹಾರಾಣಿಯ ಹಂಬಲದಂತೆ ಸುತ್ತಲೂ ನವಿಲುಗಳು ನಲಿದಾಡುತ್ತಿದ್ದರೆ, ಮಧ್ಯದಲ್ಲಿ ದೊಡ್ಡ ಸರೋವರ, ಅದರಲ್ಲಿ ಎರಡು ಹಂಸ. ದಡದಲ್ಲಿ ಒಂದು ಕುದುರೆ ಮತ್ತು ಒಂದು ನೀರು ತುಂಬಿದ